ಮೂಲ ದಾವಾ ಸಂಖ್ಯೆ 179/2016 ಪಿ ಡಬ್ಲ್ಯೂ 2 ಪೂಜಾರ ಲಕ್ಷ್ಮಿಕಾಂತಪ್ಪ ಬಿನ್ ಲೇಟ್ ತಿಮ್ಮಪ್ಪ

(ದಿನಾಂಕ 30-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಜಿ ಕೆ ಜಿ ವಕೀಲರಿಂದಃ-

ನಾನು ವಾದಿಯ ತಾಯಿಯ ತಾಯಿಯನ್ನು(ಅಜ್ಜಿ ನೋಡಿರುವುದಿಲ್ಲ. ಹನುಮವ್ವಳಿಗೆ ಒಟ್ಟು 6 ಎಕರೆ 39 ಸೆಂಟ್ಸ ಜಮೀನು ಬಂದಿತ್ತು. ಸದರಿ ಜಮೀನನ್ನು ಮಾರಾಟ ಮಾಡುತ್ತಾ ಈಗ ಪ್ರಸ್ತುತ ಕೇವಲ 59 ಸೆಂಟ್ಸ ಜಮೀನು ಉಳಿದಿರುತ್ತದೆಂದರೆ ಸರಿಯಲ್ಲ. 1 ಎಕರೆ 33 ಸೆಂಟ್ಸ ಜಮೀನು ಉಳಿದಿರುತ್ತದೆ. ಸದರಿ ವಿಷಯವನ್ನು ನಾನು ನನ್ನ ಪ್ರಮಾಣಪತರದಲ್ಲಿ ಹೇಳಿ ಬರೆಸಿರುತ್ತೇನೆ. ದಾವಾಸ್ತಿಯಲ್ಲಿ ಮೊದಲು ಪ್ರತಿವಾದಿಯ ತಂದೆ ಸ್ವಾಧೀನದಲ್ಲಿದ್ದು, ಅದಕ್ಕಿಂತ ಪೂರ್ವದಲ್ಲಿ ಆತನ ತಾಯಿ ಸಾವಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯ ತಾಯಿ ಸಾವಧೀನದಲ್ಲಿದ್ದರು ಎಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ ಪ್ರತಿವಾದಿ ವಾದಿಯ ಒಪ್ಪಿಗೆಯಿಲ್ಲದೇ ಸುಮಾರು 15 ವರ್ಷಗಳ ಹಿಂದೆ ಗ್ರಾಮಪಂಚಾಯ್ತಿಯ ಪರವಾನಿಗೆ ಪಡೆದುಕೊಳ್ಳದೇ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಸದರಿ ಆಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

ವಾದಿಯ ಜಮೀನಿನಲ್ಲಿ ಸುಮಾರು 30 ವರ್ಷಗಳಿಂದಲೂ ತೇರನ್ನು ಎಳೆಯುತ್ತಾರೆಂದರೆ ಸರಿ. ಸುಮಾರು 5-6 ವರ್ಷಗಳಿಂದ ಈಚೆಗೆ ಗ್ರಾಮ ಪಂಚಾಯ್ತಿ ವತಿಯಿಂದ ತೇರು ಎಳೆಯುವ ಜಾಗದಲ್ಲಿ ರಸ್ತೆ ಮಾಡಿರುತ್ತಾರೆಂದರೆ ಸರಿ. ಆ ರಸ್ತೆಯ ಉತ್ತರಕ್ಕೆ ಜಾಣ ಶಿವಾನಂದ, ವೀರಣ್ಣ, ಪ್ರತಿವಾದಿ ಹಾಗೂ ಜಾಣ ಕಲ್ಲೇಶ್ವರವರ ಮನೆಗಳು ಬರುತ್ತವೆಂದರೆ ಸರಿ. ಸದರಿಯವರ ಮನೆಗಳ ಮುಂದೆ ತೆಂಗಿನಮರಗಳು

ಮೂಲ ದಾವಾ ಸಂಖ್ಯೆ 179/2016 ಪಿ ಡಬ್ಲ್ಯೂ 2 ಪೂಜಾರ ಲಕ್ಷ್ಮಿಕಾಂತಪ್ಪ ಬಿನ್ ಲೇಟ್ ತಿಮ್ಮಪ್ಪ

ಬೆಳೆದಿರುತ್ತವೆಂದರೆ ಸರಿ. ಅವರ ಮನೆಯ ಮುಂದೆ ಬೆಳೆದಿರುವ ತೆಂಗಿನಮರಗಳಿಗೆ ಸಂಬಂಧಿಸಿದಂತೆ ವಾದಿ ಮತ್ತು ವಾದಿಯ ತಾಯಿ ತಕರಾರು ಮಾಡಿರುವುದಿಲ್ಲವೆಂದರೆ ಸರಿ. ಊರಲ್ಲಿ ಯಾರಾದರೂ ಆಸ್ತಿಯನ್ನು ಮಾರಾಟ ಮಾಡಿದರೆ ಅದರ ಬಗ್ಗೆ ಸಾಮಾನ್ಯವಾಗಿ ಮಾಹಿತಿ ಇರುತ್ತದೆಂದರೆ ಸರಿ. ದಾವಾಸ್ತಿಯನ್ನು 1979 ನೇ ಸಾಲಿನಲ್ಲಿ ವಾದಿಯ ತಾಯಿ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ದಾವಾಸ್ತಿಗೆ ಸಂಬಂಧಪಟ್ಟಂತೆ ಸರ್ವೆಯನ್ನು ಮಾಡಿದಾಗ ಪ್ರತಿವಾದಿ ಮನೆ ಕಟ್ಟಿಕೊಂಡಿರುವ ವಿಚಾರ ತಿಳಿದುಬಂದಿರುತ್ತದೆ. ಈಗ್ಗೆ 5-6 ವರ್ಷಗಳ ಹಿಂದೆ ವಾದಿಯು ಸರ್ವೆಯನ್ನು ಮಾಡಿಸಿರುತ್ತಾರೆ. ಸರ್ವೆ ಮಾಡಿಸುವಾಗ ನಾನು ಇರಲಿಲ್ಲ.

ವಾದಿಯ ತಾಯಿ ತೀರಿಕೊಂಡು ಸುಮಾರು 30 ವರ್ಷಗಳಾಗಿರಬಹುದು. ವಾದಿಯ ತಾಯಿ ತೀರಿದ ನಂತರ ತಕ್ಷಣವೇ ದಾವಾಸ್ತಿಯನ್ನು ವಾದಿಯ ಹೆಸರಿಗೆ ಹಕ್ಕುಬದಲಾವಣೆ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ಹಕ್ಕುಬದಲಾವಣೆಯನ್ನು ಮಾಡಿಕೊಂಡಿರುತ್ತಾರೆ. ವಾದಿ ಯಾವುದೇ ಸರ್ವೆಯನ್ನು ಮಾಡಿಸಿರುವುದಿಲ್ಲ ಹಾಗೂ ದಾವಾಸ್ತಿಗೆ ಪ್ರತಿವಾದಿಯು ಯಾವುದೇ ತಕರಾರನ್ನು ಮಾಡಿರುವುದಿಲ್ಲವೆಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ